ಒಂದು ನಿರ್ದಿಷ್ಟ ಸಂಗತಿಯತ್ತ ಬೆರಳು ಮಾಡಿದರೂ ಅದೇ ಅಂತಿಮ ಸತ್ಯವೆಂದು ಖಚಿತವಾಗಿ ಗೊತ್ತಾಗುವುದಿಲ್ಲ.

'ಇದಕ್ಕೆಲ್ಲ ಅರ್ಥ ಎನ್ನುವುದಿಲ್ಲ' ಮಧ್ಯಮ ವರ್ಗದ ಒಂದು ಕುಟುಂಬದಲ್ಲಿದ್ದೂ ಕುಟುಂಬಕ್ಕೆ ಅನ್ಯವಾಗಿರುವ ಜೀವವೊಂದನ್ನು ಚಿತ್ರಿಸುತ್ತಲೇ ಪ್ರಭುತ್ವದ ಅರ್ಥರಹಿತ ನಿರ್ಧಾರಗಳನ್ನೂ ಪರಸ್ಪರ ಸಂಪರ್ಕವೇ ಇಲ್ಲದ ಒಂದು ಕುಟುಂಬದವರನ್ನೂ ಸೂಕ್ಷ್ಮವಾಗಿ ತೋರಿಸುವ ಕತೆ. ಒಂದು ಟೀವಿ ಕೆಟ್ಟುಹೋಗುವುದರಿಂದ ಕುಟುಂಬದಲ್ಲಾಗುವ ಏರುಪೇರು ನೋಟಿನ ಅಮಾನ್ಯೀಕರಣದಿಂದ ಜನಜೀವನದಲ್ಲಾಗುವ ಅಸ್ತವ್ಯಸ್ತತೆಗಿಂತ ಏನೇನೂ ಕಡಿಮೆಯಲ್ಲ ಎಂಬುದೇ ಇಲ್ಲಿನ ವ್ಯಂಗ್ಯ.

ಕಥಾರಚನೆಯ ದೃಷ್ಟಿಯಿಂದ ಮೂರೇ ಪುಟಗಳಲ್ಲಿರುವ ಕತೆ 'ಭೇಟಿ' ಒಂದು ಕುತೂಹಲಕರ ಪ್ರಯೋಗ. ಭ್ರಷ್ಟ ಸಮಾಜವೊಂದರಲ್ಲಿ ಅಸ್ಪಷ್ಟ ಕೈಚಳಕ ವಹಿಸಬಹುದಾದ ಪಾತ್ರವನ್ನು ಸೂಚಿಸುವ ಈ ಕತೆಯಲ್ಲಿ ಎಲ್ಲವೂ 'ಅಂಡರ್‌ಸ್ಟೇಟ್‌ಮೆಂಟ್'. ನಡೆದದ್ದಕ್ಕೂ ನಡೆಯಬಹುದಾದ್ದಕ್ಕೂ ನಡುವೆ ಇರಬೇಕಾದ ಗೆರೆಯೇ ಇಲ್ಲಿ ಮಾಯ. ಈ ಮಾತು ಸ್ವಲ್ಪಮಟ್ಟಿಗೆ ಮೊದಲ ಕತೆ 'ಕನಸುಗಳು ಖಾಸಗಿ'ಗೂ ಅನ್ವಯಿಸುತ್ತದೆ.

ಇಲ್ಲಿನ ಒಂಬತ್ತು ಕತೆಗಳನ್ನು ಒಟ್ಟಿಗೆ ಓದಿದಾಗ ನರೇಂದ್ರ ಪೈ ಅವರ ನಿರೂಪಣಾ ಸಂಯಮ ಮತ್ತು ಮೇಲುನೋಟಕ್ಕೆ ತೀರ ಸರಳವೆಂದು ಭಾಸವಾಗುವ ಸಂಕೀರ್ಣ ಸಂರಚನೆ ಗಮನ ಸೆಳೆಯುತ್ತವೆ. ಕ್ರೌರ್ಯವನ್ನು ಕುರಿತು ಈ ಕತೆಗಾರರಿಗಿರುವ ಆತಂಕ, ಪಾತ್ರಗಳನ್ನು ಕುರಿತು ಅವರಿಗಿರುವ ಅನುಕಂಪಭರಿತ ತಿಳಿವಳಿಕೆ, ಒಳಿತು ಕೆಡುಕುಗಳನ್ನು ಕುರಿತ ಕುತೂಹಲ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಮನುಷ್ಯನ ನ್ಯೂನತೆಗಳ ಬಗ್ಗೆ ಅವರಿಗಿರುವ ವಿಮರ್ಶಾತ್ಮಕ ದೃಷ್ಟಿ, ಇವೆಲ್ಲವೂ ಅಪೂರ್ವವಾದಂಥವು.

ಭಾಷೆಯ ಬಳಕೆಯಲ್ಲಿ ನರೇಂದ್ರರದು ಮಹಾ ಜಿಪುಣತನ. ಅನವಶ್ಯಕವಾಗಿ ಅವರು ಒಂದೇ ಒಂದು ಶಬ್ದವನ್ನೂ ಬಳಸುವವರಲ್ಲ. ಆದ್ದರಿಂದಲೇ ಇಲ್ಲಿನ ಕತೆಗಳಿಗೆ ಅಪೂರ್ವ ಶಿಲ್ಪವಿದ್ದು ಅದು ಅವರ ಕತೆಗಳ ಧ್ವನಿಶಕ್ತಿಯನ್ನು ಹೆಚ್ಚಿಸಿದೆ. ಅವರು ಕತೆಗಳ ಒಳನೇಯ್ಗೆಯಾಗಿ ಕಟ್ಟಿಕೊಡುವ ಸೂಕ್ಷ್ಮ ವಿವರಗಳು ಕತೆಗಳಿಗೆ ತಮ್ಮ ಆಶಯಗಳಿಗಿಂತ ಮಿಗಿಲಾದ ಸಾಮಾಜಿಕ, ರಾಜಕೀಯ ಆಯಾಮಗಳನ್ನು ಕೊಟ್ಟುಬಿಡುತ್ತವೆ. ಉದಾಹರಣೆಗೆ 'ರುಕ್ಕುಮಣಿ' ಕತೆಯಲ್ಲಿ ಬರುವ ಮೊಬೈಲು ಮತ್ತು ಅದರಿಂದ ಬರುವ ಮೆಸೇಜುಗಳು; 'ಸಾಕ್ಷಿ' ಕತೆಯಲ್ಲಿ ವರ್ಣಿತವಾಗಿರುವ ಪೊಲೀಸ್ ಸ್ಟೇಷನ್ನಿನ ಮತ್ತು ಕೋರ್ಟಿನ ಕಾರ್ಯ ವೈಖರಿ; 'ಇದಕ್ಕೆಲ್ಲ ಅರ್ಥ ಎನ್ನುವುದಿಲ್ಲ...' ಕತೆಯಲ್ಲಿ ಬರುವ ನೋಟಿನ ಅಮಾನ್ಯೀಕರಣ, ಅದರ ಪರಿಣಾಮವಾಗಿ ಬ್ಯಾಂಕುಗಳಲ್ಲಿ ಹಳೆಯ ನೋಟುಗಳನ್ನು ಬದಲಾಯಿಸಿಕೊಳ್ಳಬೇಕಾಗುವ ಪ್ರಕ್ರಿಯೆ, ಇತ್ಯಾದಿ.

ಮೇಲುನೋಟಕ್ಕೆ ಇವೆಲ್ಲವೂ ಅಪರಾಧದ ಕತೆಗಳಂತೆ ಕಾಣಬಹುದು. ಆದರೆ, ಇಲ್ಲಿ ಒಬ್ಬನೇ ಒಬ್ಬ ಅಪರಾಧಿಯೂ ಇಲ್ಲ. ಇರುವುದು ನಮ್ಮ ದೈನಂದಿನ ಜೀವನದಲ್ಲಿ ನಮ್ಮದೇ ಸುಪ್ತಪ್ರಜ್ಞೆ ಸ್ಫೋಟಗೊಂಡಾಗ ವ್ಯಕ್ತವಾಗುವ ಅಗೋಚರ ವಾಸ್ತವ. ಪ್ರತಿಯೊಂದು ಕತೆಯೂ ನಾವು ಎದುರು ನೋಡಿರದ ಸ್ಥಳಕ್ಕೆ ನಮ್ಮನ್ನು ಕರೆದೊಯ್ದು ನಾವೇ ಆ ಸ್ಥಳದ ಮೂಲೆಮೊಡಕುಗಳನ್ನು ಅನ್ವೇಷಿಸುವಂತೆ ಮಾಡುತ್ತವೆ.

ಮನಸ್ಸನ್ನು ತೀವ್ರವಾಗಿ ತಟ್ಟುವ ಹೊತ್ತಿಗೆ ಸಂತೋಷವನ್ನೂ ನೀಡುವ ಈ ಸಂಕಲನ ನೇರವಾಗಿ ಕತೆ ಹೇಳದ ತನ್ನ ನವೀನ ನಿರೂಪಣಾ ವಿನ್ಯಾಸದಿಂದಲೂ ಗಮನಾರ್ಹವಾಗಿದೆ.